
ಹೆಣ್ಣಿನ ಆತ್ಮಕಥನಗಳು ಯಾಕಾಗಿ ಗಂಡಿನ ಆತ್ಮಕಥನಗಳಿಗಿಂತ ಭಿನ್ನ? ಮುಖ್ಯ? ನಿರ್ಣಾಯಕ? ಹೆಣ್ಣಿನ ಆತ್ಮಕಥನಗಳ ಸರಿಯಾದ ಅಧ್ಯಯನವು ಗಂಡು ಹೆಣ್ಣಿನ ಸಮೀಕರಣದ ನಕಾಶೆಯನ್ನೇ ಬದಲಿಸುವಷ್ಟು ಶಕ್ತವಾದುದು. ಸಾಮಾಜಿಕ ವ್ಯವಸ್ಥೆಯ, ಮೌಲ್ಯವ್ಯವಸ್ಥೆಯ ಅಡಿಪಾಯಗಳನ್ನೇ ಅಲ್ಲಾಡಿಸುವ ಬಲ ಇವುಗಳಿಗಿದೆ ಎಂದರೆ, ನಿಜವನ್ನು ಹೇಳಿದಂತಾಗುವುದಿಲ್ಲ. ಈ ಆತ್ಮಕಥನಗಳಿಗೆ 'ಮರು ಇತಿಹಾಸ'ದ ಅಸಾಧಾರಣ ಶಕ್ತಿ ಇದೆ ಎನ್ನುವುದೇ ಸರಿಯಾದ ಹೇಳಿಕೆ.

ಸಮಕಾಲೀನ ಸಂದರ್ಭವು 'ಮರು ಇತಿಹಾಸ'ದ ಕಾಲವೇ ಆಗಿದೆ. ಇತಿಹಾಸವನ್ನು ಅನೇಕ ಆಯಾಮಗಳಲ್ಲಿ ಮರು ನಿರೂಪಿಸಲಾಗುತ್ತಿದೆ. ಕತ್ತಲೆಯ ಜಗತ್ತಿಗೆ ಬೆಳಕು ಹಾಯಿಸುವ ಪ್ರಕ್ರಿಯೆ ಇದು. ಆದರೆ, ಈ ಬೆಳಕಿನಲ್ಲಿ ಕಾಣಿಸುವ ಅನೇಕ ಅಪ್ರಿಯ ಸತ್ಯಗಳಿಗೆ ಸಜ್ಜಾಗಬೇಕಾದ ಅನಿವಾರ್ಯತೆಯೂ ನಮ್ಮೆದುರಿಗಿದೆ. ಇದು ಕೇವಲ ದಮನಿತ ಲೋಕಗಳಿಗೆ ಮಾತ್ರ ಸಂಬಂಧಪಟ್ಟದ್ದಲ್ಲ. ಇದು ಸಾಂಸ್ಕೃತಿಕ ಲೋಕಕ್ಕೂ ಅಷ್ಟೇ ಗಾಢವಾಗಿ ಸಂಬಂಧಪಟ್ಟದ್ದು. ಕಲಾಮೀಮಾಂಸೆಯ ಹಿನ್ನೆಲೆಯಲ್ಲಿ ಕಲಾಪ್ರಕಾರಗಳ ಅಭಿವ್ಯಕ್ತಿ ಮಾದರಿಗಳ ಜೊತೆಯಲ್ಲಿಯೂ ಇದಕ್ಕೆ ಅಷ್ಟೇ ಗಾಢವಾದ ಸಂಬಂಧವಿದೆ. ಹೆಣ್ಣಿನ ಆತ್ಮಕಥನಗಳು ಮರುಇತಿಹಾಸದಲ್ಲಿ ವಹಿಸುತ್ತಿರುವ ಮುಖ್ಯಭೂಮಿಕೆಯ ಬಗೆಗೆ ಅರಿವು ಈಗ ಮೂಡುತ್ತಿದೆ. ಈ ತನಕ ಆತ್ಮಕಥನಗಳನ್ನು ಸಾಹಿತ್ಯದ ವಿಶಿಷ್ಟ ಪ್ರಕಾರವಾಗಿ ನೋಡಲಾಗುತ್ತಿತ್ತು. ಅವುಗಳನ್ನು 'ಕಥನ ಕುತೂಹಲ'ಕ್ಕಾಗಿ ನೋಡುವ ಪರಿಪಾಠವೇ ನಮ್ಮಲ್ಲಿ ಹೆಚ್ಚು. ಮಹಿಳೆಯರ ಆತ್ಮಕಥೆಗಳನ್ನಂತೂ ಅವರ ಬದುಕಿನ ವೈಯಕ್ತಿಕ ವಿವರಗಳಿಗಾಗಿ ನೋಡುವುದೇ ಹೆಚ್ಚು. (ಈಗಲೂ ಹೆಣ್ಣಿನ ಬರವಣಿಗೆಯಲ್ಲಿ ಸಾಧಾರಣೀಕರಣದ ಅಂಶಗಳನ್ನು ಕಡೆಗಣಿಸಿ ಅದು ವೈಯಕ್ತಿಕ ಸಂಗತಿ ಎಂದು ಭ್ರಮಿಸಿ ಭಾವಿಸುವುದರಲ್ಲಿ ಅದೇನೋ ಸುಖವನ್ನು ಕಾಣಲಾಗುತ್ತದೆ ಎನ್ನುವುದು ಮತ್ತೊಂದು ಅಪ್ರಿಯ ಸತ್ಯ ತಾನೆ!)




ಗಂಡಾಳಿಕೆಗೆ ಅಪ್ರಿಯವಾದ ಮಹತ್ವದ ಬೆಳವಣಿಗೆಯೊಂದು ಇಲ್ಲಿ ಸಂಭವಿಸುತ್ತಿದೆ ಎನ್ನುವುದು ಅನೇಕರ ಅರಿವಿಗೆ ಬಂದಂತಿಲ್ಲ. ಹೆಣ್ಣಿನ ಹೋರಾಟದ ರಾಜಕೀಯ ನೆಲೆಯನ್ನು ಈ ಆತ್ಮಕಥನಗಳು ಬಲವಾಗಿ ಸ್ಥಾಪಿಸುತ್ತಿವೆ. ಈ ಆತ್ಮಕಥನಗಳಿಗಿರುವ ನೈತಿಕ ಶಕ್ತಿಯು ಇದನ್ನು ಹೆಣ್ಣು ಬಯಸಿದಂತೆ ಮುಂದೊಯ್ಯಲು ಸಹಕರಿಸುತ್ತಿವೆ. ಆದ್ದರಿಂದಲೇ ಈ ಆತ್ಮಕಥನಗಳು ಕೇವಲ 'ಆತ್ಮ' ಕಥನಗಳ ವ್ಯಕ್ತಿಗತ ಚೌಕಟ್ಟಿನಲ್ಲಿ ಉಳಿಯದೇ ಸಾಮೂಹಿಕ ಮತ್ತು ಸಾಮುದಾಯಿಕ ಕಥನಗಳೂ ಆಗುವ ವಿಸ್ತಾರ ಮತ್ತು ವ್ಯಾಪ್ತಿಯನ್ನು ಪಡೆಯುತ್ತಿವೆ. ಓದಿನ ಆಯ್ಕೆಯ ಪರಿಧಿಯಲ್ಲಿ ಇವು ಸೀಮಿತವಾಗುತ್ತಿಲ್ಲ. ಬೇಕಾದರೆ ಓದುವ ಅವಕಾಶವನ್ನು ಓದುಗರಿಗೆ ನೀಡದೆ, ಓದಲೇಬೇಕಾದ ಅನಿವಾರ್ಯತೆಯನ್ನೂ ಇವು ಸೃಷ್ಟಿಸುತ್ತಿವೆ. ಕೆಲವು ಪಠ್ಯಗಳನ್ನು ನಾವು ಮೂಲ ಪಠ್ಯಗಳೆಂದು ಗುರುತಿಸುತ್ತೇವಲ್ಲ, ಹಾಗೆ ಮಹಿಳಾ ಆತ್ಮಕಥನಗಳು ಮೂಲ ಪಠ್ಯಗಳಾಗುತ್ತಿವೆ. ಇದರ ಬಗ್ಗೆ ಮುಂದೆ ಇನ್ನೂ ವಿವರವಾಗಿ ಚರ್ಚಿಸಬಹುದು.

ಸೋಫಿಯಾ ಉದಾಹರಣೆಯನ್ನೇ ಮುಂದುವರೆಸುತ್ತೇನೆ. ಆಕೆ ಡೈರಿಯಲ್ಲಿ ಬರೆದಿರುವ